ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	988
2.	ಪ್ರಶ್ನೆ ಕೇಳಿದ ಸದಸ್ಯರು	ಶ್ರೀ. ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) (ವಿಧಾನ ಪರಿಷತ್ ಸದಸ್ಯರು)
3.	ಉತ್ತರಿಸುವ ದಿನಾಂಕ:	12.03.2020
4.	ಉತ್ತರಿಸುವ ಸಚಿವರು	ಮಾನ್ಯ ಮುಖ್ಯ ಮಂತ್ರಿಯವರು

ಪ್ರಶ್ನೆ		ಉತ್ತರ
(ಅ)	ರಾಷ್ಟ್ರ ರಾಜಧಾನಿ ದೆಹಲಿ ಹಾಗೂ ವಾರಣಾಸಿ ಕನ್ನಡ ಭವನದಲ್ಲಿ ಕನ್ನಡಿಗರಿಂದ ಹೆಚ್ಚಿನ ಹಣ ಸುಲಿಗೆ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?	ಇಲ್ಲ ಸರ್ಕಾರ ನಿಗಧಿ ಪಡಿಸಿರುವ ದರಗಳನ್ನು ಮಾತ್ರ ವಾಸ್ತವ್ಯ ಹೂಡಿರುವ ಅತಿಥಿಗಳಿಂದ ಪಡೆಯುತ್ತಿದ್ದು, ಸೂಕ್ತ ರಸೀದಿಯನ್ನು ನೀಡಲಾಗುತ್ತಿದೆ.
(ಆ)	ಹೀಗೆ ನಿಗದಿಗಿಂತ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವವರ ಮೇಲೆ ಸರ್ಕಾರ ಜರುಗಿಸಿರುವ ಕ್ರಮ ಏನು?	ಉದ್ಭವಿಸುವುದಿಲ್ಲ
(ಇ)	ದೆಹಲಿ ಕನ್ನಡ ಭವನದಲ್ಲಿ ನೌಕರರ ಸಂಖ್ಯೆ 150 ರಿಂದ 30ಕ್ಕೆ ಇಳಿಕೆಯಾಗಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?	ನವದೆಹಲಿಯ ಕರ್ನಾಟಕ ಭವನಕ್ಕೆ ಒಟ್ಟು 191 ಹುದ್ದೆಗಳು ಮಂಜೂರಾಗಿರುತ್ತವೆ. ಅವುಗಳಲ್ಲಿ 95 ಹುದ್ದೆಗಳು ಭರ್ತಿಯಾಗಿದ್ದು, 96 ಹುದ್ದೆಗಳು ಖಾಲಿಯಿರುತ್ತವೆ.
(ಈ)	ಹಾಗಿದ್ದಲ್ಲಿ, ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?	21 ಖಾಲಿ ಹುದ್ದೆಗಳನ್ನು ನಿಯಮಾನುಸಾರ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದು. ಮತ್ತು ನೇರನೇಮಕಾತಿ ಹುದ್ದೆಗಳ ಪೈಕಿ ವಿವಿಧ ವೃಂದಗಳ 32 ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುತ್ತಿದ್ದು, ಪ್ರಕ್ರಿಯೆ ಚಾಲನೆಯಲ್ಲಿದೆ.

(ಸಂಖ್ಯೆ: ಸಿಆಸುಇ 20 ಹೆಚ್ಎಂಬಿ 2020)

ಬಿ.ಎಸ್.ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ